ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 59 ]
Total No. of Questions : 59 ]

**ಸಂಕೇತ ಸಂಖ್ಯೆ : 01-K**

**Code No. : 01-K**

# D

**CCE PR**
**UNREVISED**
**REDUCED SYLLABUS**
**NSR & NSPR**

Question Paper Serial No. **813**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 12. 06. 2023 ] [ Date : 12. 06. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 125 ] [ Max. Marks : 125

### *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 59 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 10 × 1 = 10**

1. ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದವಿದು

   (ಎ) ಶಸ್ತ್ರ (ಬಿ) ಎಚ್ಚರ

   (ಸಿ) ಅದ್ಭುತ (ಡಿ) ಅಕ್ಷರ

2. 'ದೇವೇಂದ್ರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಲೋಪ ಸಂಧಿ (ಬಿ) ಆಗಮ ಸಂಧಿ

   (ಸಿ) ಗುಣ ಸಂಧಿ (ಡಿ) ಆದೇಶ ಸಂಧಿ

3. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು

   (ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ

   (ಸಿ) ಪ್ರಶ್ನಾರ್ಥಕ ವಾಕ್ಯ (ಡಿ) ಸಂಯೋಜಿತ ವಾಕ್ಯ

4. ಷಷ್ಠೀ ವಿಭಕ್ತಿಯ ಕಾರಕಾರ್ಥ

   (ಎ) ಸಂಬಂಧ (ಬಿ) ಅಧಿಕರಣ

   (ಸಿ) ಸಂಪ್ರದಾನ (ಡಿ) ಅಪಾದಾನ

5. 'ವ್ಯಾಪಾರಿ' ಪದವು ನಾಮಪದದ ಈ ಗುಂಪಿಗೆ ಸೇರಿದೆ

   (ಎ) ಭಾವನಾಮ (ಬಿ) ರೂಢನಾಮ

   (ಸಿ) ಅನ್ವರ್ಥನಾಮ (ಡಿ) ಅಂಕಿತನಾಮ

6. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

   (ಎ) ಉದ್ಧರಣ ಚಿಹ್ನೆ (ಬಿ) ಆವರಣ ಚಿಹ್ನೆ

   (ಸಿ) ಭಾವಸೂಚಕ ಚಿಹ್ನೆ (ಡಿ) ವಾಕ್ಯವೇಷ್ಟನ ಚಿಹ್ನೆ

7. ಸಕರ್ಮಕ ಧಾತುವಿಗೆ ಉದಾಹರಣೆಯಿದು

   (ಎ) ಓಡು (ಬಿ) ಹೋಗು

   (ಸಿ) ಮುಚ್ಚು (ಡಿ) ನಾಚು

8. ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯ

(ಎ) ಅನುಕರಣಾವ್ಯಯ (ಬಿ) ಕ್ರಿಯಾರ್ಥಕಾವ್ಯಯ

(ಸಿ) ಸಾಮಾನ್ಯಾರ್ಥಕಾವ್ಯಯ (ಡಿ) ಭಾವಸೂಚಕಾವ್ಯಯ

9. 'ಇಸವಾಸ' ಪದದ ಗ್ರಾಂಥಿಕ ರೂಪ

(ಎ) ನಂಬಿಕೆ (ಬಿ) ಅವಿಶ್ವಾಸ

(ಸಿ) ಇಸ್ವಾಸ (ಡಿ) ವಿಶ್ವಾಸ

10. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಿದು

(ಎ) ತಾನು (ಬಿ) ಅವಳು

(ಸಿ) ನೀನು (ಡಿ) ಇವರು

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 5 × 1 = 5**

11. ಕಟ್ಟಕಡೆಗೆ : ದ್ವಿರುಕ್ತಿ :: ಹುಳಹುಪ್ಪಡಿ : ......................... .

12. ಸ್ಥಾನ : ತಾಣ :: ವಂಧ್ಯಾ : ......................... .

13. ಆ ಕಲ್ಲು : ಗಮಕ ಸಮಾಸ :: ಕಣ್ದೆರೆ : ......................... .

14. ಮಾಡೋಣ : ವಿಧ್ಯರ್ಥಕ :: ಮಾಡರು : ......................... .

15. ಜಾಣತನ : ತದ್ಧಿತಾಂತಭಾವನಾಮ :: ನೆನಪು : ......................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

16. ರಾಹಿಲನು ಯಾರು ?

17. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?

18. ಹುಲಿಗೆ ಪರಮಾನಂದವಾಗಲು ಕಾರಣವೇನು ?

19. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?

20. ಕರ್ಣನಿಗೆ ಆಮಿಷಗಳನ್ನು ಒಡ್ಡಿದವರು ಯಾರು ?

21. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?

22. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ ?

23. ಒಡೆಯನ ಅಂಗಳದಲ್ಲಿ ಮಾವಿನ ಮರಗಳು ಹೇಗೆ ಬೆಳೆದು ನಿಂತಿವೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30**

24. ರಾಮಲಕ್ಷ್ಮಣರನ್ನು ಶಬರಿ ಹೇಗೆ ಉಪಚರಿಸಿದಳು ?
25. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ ?
26. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?
27. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೇನು ? ವಿವರಿಸಿ.
28. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ? ತಿಳಿಸಿ.
29. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.
30. ಕವಿ ದ.ರಾ. ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?
31. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?
32. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳಾವುವು ?
33. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ?
34. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
35. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು ಏಕೆ ?
36. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?
37. ಭಗತ್‌ಸಿಂಗ್ ತನ್ನ ಉಪವಾಸದ ಕಾರಣವನ್ನು ಸಹೋದರಿಗೆ ಹೇಗೆ ತಿಳಿಸಿದನು ?
38. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 4 × 3 = 12**

39. ಪು.ತಿ. ನರಸಿಂಹಾಚಾರ್
40. ಎ.ಎನ್. ಮೂರ್ತಿರಾವ್
41. ದ.ರಾ. ಬೇಂದ್ರೆ
42. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3**

43. ನರಕಿಯಾವನು ಸುಜನರಲಿ ಬಾ
ಹಿರನದಾವನು ಲೋಕವರಿಯಲು
ಹರಣವಿರೆ ಹೊಂದಿದನದಾವನು ಭೂಮಿಪಾಲರಲಿ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

44. ''ಸೀತೆಯ ಮುಖ ಕಮಲದಂತೆ ಅರಳಿತು''

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಎರಡನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ :2 × 3 = 6**

45. ಹಣಕ್ಕಿಂತ ಗುಣ ಮೇಲು.

**ಅಥವಾ**

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

46. ತಾಳಿದವನು ಬಾಳಿಯಾನು.

**ಅಥವಾ**

ಬೆಳೆಯುವ ಸಿರಿ ಮೊಳಕೆಯಲ್ಲಿ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

47. ''ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ.''
48. ''ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ.''
49. ''ಓಹೋ, ನನಗೇ ಗುಡಿಮನೆ ಕಟ್ತಾ ಇದ್ದೀರೋ ?''
50. ''ತೇಲಿಸಿ ಮುಳುಗಿಸಿ ಖಂಡ–ಖಂಡಗಳ''
51. ''ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ''
52. ''ಬೇರೆ ಬಣ್ಣವನೆ ಕಾಣೆ''

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

53. ಮಾರಿಗೌತಣವಾಯ್ತು ನಾಳಿನ
..................................................................
..................................................................
..................................................................
..................................................................
ವೀರರ್ಕೈವರ ನೋಯಿಸೆನು ರಾಜೀವಸಖನಾಣೆ

**ಅಥವಾ**

ಕೊರಳ ಸೆರೆ ಹಿಗ್ಗಿದವು ದೃಗುಜಲ

..........................................................................

..........................................................................

..........................................................................

..........................................................................

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :**

**1 × 4 = 4**

54. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ।।
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು ।।

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8**

55. ದುಷ್ಟಬುದ್ಧಿಯ ತಂತ್ರ ಆತನಿಗೆ ತಿರುಗುಬಾಣವಾದ ಬಗೆಯನ್ನು ಕುರಿತು ಬರೆಯಿರಿ.

**ಅಥವಾ**

ದುಷ್ಟಬುದ್ಧಿ ಹಾಗೂ ಧರ್ಮಬುದ್ಧಿ ಧರ್ಮಾಧಿಕರಣರ ಬಳಿಗೆ ಬರಲು ಕಾರಣವೇನು ? ವಿವರಿಸಿ.

56. 'ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕು' ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪನವರ ಆಶಯವಾಗಿದೆ ? ತಿಳಿಸಿ.

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನ ಕುರಿತಂತೆ ಕವಿ ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವೇನು ? ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

57. ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಶಕ್ತನಿಗೆ ಎಲ್ಲರೂ ಆಪ್ತರು, ಅಶಕ್ತನನ್ನು ಎಲ್ಲರೂ ತಿರಸ್ಕರಿಸುವರು. ದೇಹ, ಮನಸ್ಸು

ಸರಿಯಾಗಿರುವ ನಾವು ಸಿಕ್ಕ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡು ಶಕ್ತಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಳ್ಳಬೇಕು. ದೈಹಿಕ, ಮಾನಸಿಕ, ಬೌದ್ಧಿಕ, ನೈತಿಕ ಬಲಗಳ ಜೊತೆಗೆ ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಶಕ್ತಿ ಸೌಭಾಗ್ಯ ಚಿರಜೀವನದ ಒಳಗುಟ್ಟು. ದುರ್ಬಲತೆ ಎಂಬುದು ಚಿಂತೆ ದುಃಖಗಳ ಮೂಲ ಎಂದ ಸ್ವಾಮಿ ವಿವೇಕಾನಂದರು 'ಬಲಿಷ್ಠರಾಗಿ, ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯ ಬಲಗಳನ್ನು ಬೆಳೆಸಿಕೊಂಡು ನಿಮ್ಮ ಕಾಲ ಮೇಲೆ ನಿಲ್ಲಿ' ಎಂದು ತಿರುತಿರುಗಿ ಸಾರಿದರು.

ನಮ್ಮನ್ನು ದುರ್ಬಲಗೊಳಿಸುವ ನೂರಾರು ಕತೆ, ಘಟನೆ, ಚಿತ್ರಗಳು ನಿತ್ಯವೂ ಪ್ರಸಾರವಾಗುತ್ತಿರ ಬಹುದು. ಇವು ಯುವಕರ ಮನಸ್ಸನ್ನು ತಲ್ಲಣಗೊಳಿಸಬಹುದು. ಆದರೆ ಇದನ್ನು ದಾಟಿ ಮೇಲೇರಲು ಬೇಕಾದ ಶಕ್ತಿ ನಮ್ಮಲ್ಲಿಯೇ ಇದೆ. ಪ್ರತಿಯೊಬ್ಬನ ಮನಸ್ಸಿನ ಆಳದಲ್ಲಿ ದೈವೀಶಕ್ತಿ ಇದೆ. ಅಪಾರ ಶಕ್ತಿ ಇದ್ದರೂ ನಾವು ಗುಲಾಮರಂತೆ ವರ್ತಿಸುತ್ತೇವೆ. ಇದಕ್ಕೆ ಕಾರಣ ಒಂದು ಅಜ್ಞಾನ, ಇನ್ನೊಂದು ಬಾಲ್ಯದಿಂದ ಬೆಳೆಸಿಕೊಂಡು ಬಂದ ನಿಷೇಧಾತ್ಮಕ ಭಾವನೆ. ಪ್ರತಿಯೊಂದು ನಿಷೇಧಾತ್ಮಕ ಭಾವನೆ ಅಥವಾ ಯೋಚನೆ ಒಳಗಿನ ಆ ಅಪಾರ ಶಕ್ತಿಯನ್ನು ಪರಿಮಿತಗೊಳಿಸಿ ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ. ಪ್ರತಿಯೊಂದು ಆತ್ಮವಿಶ್ವಾಸದ ಭಾವನೆ ಮತ್ತು ರಚನಾತ್ಮಕ ಯೋಚನೆ ನಮ್ಮ ಅಭ್ಯುದಯಕ್ಕೆ ನೆರವಾಗುತ್ತದೆ.

***ಪ್ರಶ್ನೆಗಳು :***

ಅ) ಅಪಾರಶಕ್ತಿ ಇದ್ದರೂ ಗುಲಾಮರಂತೆ ವರ್ತಿಸಲು ಕಾರಣವೇನು ?

ಬ) ಸ್ವಾಮಿ ವಿವೇಕಾನಂದರು ಯುವಕರಿಗೆ ನೀಡಿದ ಸಂದೇಶವೇನು ? ತಿಳಿಸಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

58. ನಿಮ್ಮನ್ನು ದೇವನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ 'ಅದ್ವಿತ್' ಎಂದು ಭಾವಿಸಿಕೊಂಡು, ಬೀದಿದೀಪ ಸರಿಪಡಿಸಿಕೊಡುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಅಶ್ವತ್ಥ್' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 'ಸದ್ಭಾವನಾ ದಿನ' ವನ್ನು ವಿವರಿಸಿ ಬೆಂಗಳೂರಿನ ವಿವೇಕಾನಂದ ನಗರದ ನಿವಾಸಿಯಾಗಿರುವ 'ಕಸ್ತೂರಿ' ಎಂಬ ಹೆಸರಿನ ತಾಯಿಯವರಿಗೆ ಪತ್ರವನ್ನು ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :**

**1 × 5 = 5**

59. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ

**ಅಥವಾ**

ಗ್ರಂಥಾಲಯಗಳ ಮಹತ್ತ್ವ